ಶ್ರೀ ಬಿ. ಎ. ಉಪ್ಪಿನ. ಅಧ್ಯಕ್ಷರೇ, ನಾನೂ ಕೂಡಾ.....

ಅಧ್ಯಕ್ಷರು.—ಈ ಸ್ಥಾನದಲ್ಲಿ ಕುಳಿತಿರುವ ನನಗೆ ಕೆಲವು ಅಸ್ತ್ರಗಳನ್ನು ತಾವು ಕೊಟ್ಟಿದ್ದೀರಿ. ನಾನು ಈ ಸಭೆಯ ಅಧ್ಯಕ್ಷ. ಈ ಸಭೆಯಲ್ಲಿ ಯಾರಾದರೂ ಹದ್ದುಮೀರಿ ನಡೆದರೆ, ಉದ್ಧಟತನ ಮಾಡಿದರೆ ಅವರನ್ನು ಹೊರಗೆ ಕಳಿಸುವ ಅವಕಾಶ ನಮಗೆ ಇದೆ.

ಶ್ರೀ ಬಿ. ಎ. ಉಪ್ಪಿನ.—ನಾನು ಈಗ ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು.—ಇವರಿಗೆ ತಿಳುವಳಿಕೆ ಬಹಳ ಕಡಿಮೆ ಇದೆ. ಏನು ಮಾಡುವುದು? ಯಾವಗಲ್ ಅವರೇ ತಾವು ತಮ್ಮ ಉತ್ತರವನ್ನು ಪ್ರಾರಂಭ ಮಾಡಿ.

ಶ್ರೀ ಬಿ. ಆರ್. ಯಾವಗಲ್.—ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್.....

ಅಧ್ಯಕ್ಷರು.—ರಾಜವರ್ಧನ್ ಅವರೇ, ಅವರನ್ನು ಸ್ವಲ್ಪ ಹೊರಗಡೆಕರೆದುಕೊಂಡು ಹೋಗಿ ಹೇಳಿ.

ಶ್ರೀ ಬಿ. ಆರ್. ಯಾವಗಲ್.—೮ ಜನ ಸನ್ಮಾನ್ಯ ಸದಸ್ಯರು ಬೇಡಿಕೆ ಬಗ್ಗೆ ಮಾತನಾಡಿದ್ದಾರೆ. ಪ್ರಥಮದಲ್ಲಿ ಎಲ್ಲರಿಗೂ.....

SRI M. MALLIKARJUNA KHARGE.—I raise a point of order.

SRI U. BHOOPATHY.—Legislature standards have to be maintained.

ಅಧ್ಯಕ್ಷರು.—ಅವರಿಗೆ ಬ್ಲಡ್ ಪ್ರಶರ್ ಇರಬಹುದು. ಸಮಾಧಾನ ಮಾಡಿಕೊಳ್ಳಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಹಾಗಾದರೆ ಅವರನ್ನು ದವಾಖಾನೆಗೆ ಕರೆದು ಕೊಂಡು ಹೋಗಲಿ.

(ಗೊಂದಲ)

ಅಧ್ಯಕ್ಷರು.—ಯಾರಂ ಏನೇ ಹೇಳಲಿ ಸ್ಪೀಕರ್ ಆದವರು ಸಮಾಧಾನದಿಂದ ಇರಬೇಕಾಗುತ್ತದೆ.

(ಈ ಸಮಯದಲ್ಲಿ ಶ್ರೀ ಬಿ. ಎ. ಉಪ್ಪಿನ ಅವರಂ ಹಾಗೂ ಇನ್ನಿತರ ಕೆಲವು ಸದಸ್ಯರು ಸಭೆಯಿಂದ ಹೊರಗಡೆ ಹೋದರು)

ಶ್ರೀ ರಾಮನಾಥ್ ರೈ.—ಸಭಾಧ್ಯಕ್ಷರಿಗೆ ಅವಮಾನ ಮಾಡಿ ಅವರು ಹೋಗುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಇಲ್ಲ, ಅವರು ಚಾ ಕುಡಿಯುವುದಕ್ಕೆ ಹೋಗುತ್ತಿದ್ದಾರೆ.

ಅಧ್ಯಕ್ಷರು.—ಈಗ ಮಾನ್ಯ ಯಾವಗಾಲ್ ಅವರು ತಮ್ಮ ಉತ್ತರವನ್ನು ಕೊಡಲಿ.

ಶ್ರೀ ಬಿ. ಆರ್ ಯಾವಗಲ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಮಂತ್ರಿಗಳು).—ಸಭಾಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಇಲಾಖೆಯ ಬೇಡಿಕೆಯ ಮೇಲೆ ಸುಮಾರು ೮ ಜನ ಶಾಸಕರು ಮಾತನಾಡಿದ್ದಾರೆ. ಅವರೆಲ್ಲರಿಗೂ ನಾನಂ ಪ್ರಥಮದಲ್ಲಿ ಅಭಿನಂದಿಸುತ್ತೇನೆ. ಈ ಗ್ರಾಮೀಣ ಅಭಿವೃದ್ಧಿ ಇಲಾಖೆ ಒಂದು ವಿಶಿಷ್ಟ ಇಲಾಖೆ. ನಮ್ಮ ಇಲಾಖೆ ರಾಜ್ಯ ಮತ್ತು ದೇಶ ಮಟ್ಟದಲ್ಲಿ ಹೆಚ್ಚು ಕಾಲ ಜನರ ಜೀವನದ ಬಗ್ಗೆ ಮತ್ತು ಅವರ ಅಭಿವೃದ್ಧಿ ಬಗ್ಗೆ, ಅವರ ಏಳಿಗೆಯ ಬಗ್ಗೆ ಚಿಂತನೆ ಮಾಡುವಂತಹ ಮತ್ತು ಅವರ ಅಭಿವೃದ್ಧಿಯ ಎಲ್ಲಾ ಕಾರ್ಯಕ್ರಮಗಳನ್ನೂ ಅನುಷ್ಠಾನ ಗೊಳಿಸುವ ಬಗ್ಗೆ ಎಲ್ಲಾ ಶಕ್ತಿಯನ್ನು ವಿನಿಯೋಗ ಮಾಡತಕ್ಕ ಇಲಾಖೆ ಇದು ಆಗಿದೆ. ಈ ಇಲಾಖೆಯಲ್ಲಿ ಗ್ರಾಮಾಂತರ ಜನತೆಯ ಹಲವು ಹತ್ತು ಕಾರ್ಯಕ್ರಮಂ ಗಳನ್ನು ಅಳವಡಿಸಿಕೊಂಡು ಬಂದು ಬೇರೆ ಬೇರೆ ರೀತಿಯ ಬೇರೆ ವರ್ಗದ ಜನರಿಗೆ, ಅವರ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಪಟ್ಟು ಆ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವ ವಿಷಯ ನಿಮಗೆ ಗೊತ್ತೇ ಇದೆ. ಅಶಿಕ್ಷಿತರು ಮತ್ತು ಹಿಂದುಳಿದ ವರ್ಗದವರು ಹಾಗೂ ದುರ್ಬಲ ವರ್ಗದವರ ಬಗ್ಗೆ ಕೆಲಸ ಮಾಡಬೇಕಾದಂತಹ ಸಂದರ್ಭದಲ್ಲಿ. ಅವರ ಒಂದು ಜೀವನದ ಕ್ಲಿಷ್ಟತೆ ಹಾಗೂ ಅವರ ವಿದ್ಯಾ ಮಟ್ಟವನ್ನು ನೋಡಿಕೊಂಡು ಈ ಬಗ್ಗೆ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಬೇಕಾಗಿರುವ ವಿಶೇಷ ಜವಾಬ್ದಾರಿಯನ್ನು ಹೊತ್ತು ನಡೆಯುತ್ತಿರುವ ಇಲಾಖೆ ಇದು ಆಗಿದೆ ಎನ್ನುವ ವಿಷಯವನ್ನು ನಾನು ತಮ್ಮ ಮುಂಖಾಂತರ ಸಭೆಯ ಎದುರುಗಡೆ ಇಡುತ್ತಿದ್ದೇನೆ.